ದೊಡ್ಡ ಅರ್ಹತೆಯಿದ್ದ ವೈದ್ಯರು ಅಲ್ಲಿ ಕೆಲಸಕ್ಕೆ ಸೇರಿರಲಿಲ್ಲ. ಹಾಗಾಗಿ ನನ್ನ ಅರ್ಹತೆಗಳು ಅವನಲ್ಲಿ ಸ್ವಲ್ಪ ಅಸಮಾಧಾನ ಮೂಡಿಸಿದ್ದುದು ಗೊತ್ತಾಯ್ತು.

ನಮ್ಮ ಮೊದಲ ಭೇಟಿಯಲ್ಲೇ, "ನೀನು ಇಂತಹ ಸರ್ಜರಿಗಳನ್ನು ಮಾಡುತ್ತೀಯಂತೆ ಹೌದಾ?'' ಅಂತ ಕೇಳಿಬಿಟ್ಟಿದ್ದ. ವೈದ್ಯೆಯಾಗಿ ನನಗಿದ್ದ ಅರ್ಹತೆಗಳು ನಾನು ಬರುವ ಮೊದಲೇ ಅವನಿಗೆ ತಿಳಿದಿದ್ದುದು ಅವನ ಪ್ರಶ್ನೆಯಿಂದ ನನಗೆ ಅರಿವಾಗಿತ್ತು. ಒಳಗೊಳಗೇ ಮೆಲ್ಲಗೆ ನಕ್ಕಿದ್ದೆ.

ಅವನು ಆ ಆಸ್ಪತ್ರೆಯಲ್ಲಿ ಆಗಾಗಲೇ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದ ವೈದ್ಯ. ಪೂರ್ವ ಯೂರೋಪಿನ ಪೋಲೆಂಡ್ ದೇಶದವನು. ಅವನನ್ನು ಈ ಆಸ್ಪತ್ರೆಯವರೆಲ್ಲ ಮಿ.ಕೆ. ಎನ್ನುತ್ತಿದ್ದರು. ಅವನಿಗಿದ್ದ ಕಷ್ಟಕರವಾದ ಪೋಲಿಶ್ ಹೆಸರನ್ನು ಹೇಳಲಾಗದ ಇಂಗ್ಲಿಷರು ಕಂಡಕೊಂಡ ಸುಲಭ ಮಾರ್ಗ ಇದಾಗಿತ್ತು. ನನ್ನ ಹೆಸರು ಕೂಡ ಇಂಗ್ಲಿಷರ ನಾಲಗೆ ಸೋಕಿ ವಿಸರ್ಜಿತವಾಗುವ ವೇಳೆಗೆ ಬದಲಾಗಿ ಹೋಗಿರುತ್ತಿತ್ತು.

'ಪ್ರೀತಿ' ಎಂದು ನನ್ನ ತಂದೆತಾಯಿ ಪ್ರೇಮದಿಂದ ಇಟ್ಟ ಹೆಸರನ್ನು ಹೇಳಲಾಗದ ಇಂಗ್ಲಿಷರು ನನ್ನನ್ನು 'ಪ್ರೆಟ್ಟಿ' ಅಂತಲೇ ಕರೆಯುತ್ತಿದ್ದುದು. ಜೀವನದಲ್ಲಿ ನನ್ನನ್ನು 'ಪ್ರೆಟ್ಟಿ' ಎಂದು ಕರೆದವರು ಯಾರೂ ಇದ್ದಿರಲಿಲ್ಲ. ಹಾಗಾಗಿ ಅನ್ವರ್ಥಕವಲ್ಲದಿದ್ದರೂ, ನಿರಾಯಾಸವಾಗಿ ದೊರೆತ ಸುಳ್ಳು ಹೆಸರನ್ನು ಗಲಾಟೆಯಿಲ್ಲದೆ ಒಪ್ಪಿಕೊಂಡಿದ್ದೆ. ಮನುಷ್ಯರನ್ನು ಅಳೆದು ಸುರಿದು ಅವರ ನಡುವೆ ದಾರಿ ಕಂಡುಕೊಳ್ಳುವುದನ್ನು ನನ್ನ ವೈದ್ಯ ವೃತ್ತಿ ಕಲಿಸಿತ್ತು.

ಹಾಗಂತ ನನ್ನ ಬದುಕಲ್ಲಿ ಕಂಟಕವಿಲ್ಲದಿರಲಿಲ್ಲ. ನನ್ನಂತೆ ವೈದ್ಯನಾಗಿರುವ ನನ್ನ ಗಂಡನಿಗೆ ಜಗತ್ತಿನ ಯಾವ ಆಸ್ಪತ್ರೆಯೂ ಒದಗಿ ಬರಲಿಲ್ಲ. ಭಾರತದ ಹಲವು ಕಡೆ ಕೆಲಸಮಾಡಿ ಅವುಗಳನ್ನೆಲ್ಲ ಹೀಗಳೆದು ಇಂಗ್ಲೆಂಡಿಗೆ ಬಂದಿದ್ದ. ಇಲ್ಲಿಯೂ ಅದೇ ಕಥೆ ಮುಂದುವರೆಯಿತು. 15 ವರ್ಷಗಳಲ್ಲಿ ಒಂಬತ್ತು ಜಾಗವನ್ನು ಬದಲಾಯಿಸಿದೆವು. 'ಕುಣಿಯಲು ಬಾರದ ಬಡ್ಡಿಗೆ...' ಎಂದು ಅಂದುಕೊಂಡೇ ಕೆಲಸ ಬದಲಾಯಿಸುತ್ತ ಹೇಗೋ ಹೊಂದಿಕೊಂಡು ಹೊಸ ಜಾಗಗಳಿಗೆ ಹೋಗಬೇಕಾದ ಕರ್ಮವನ್ನು ನನ್ನದಾಗಿಸಿಕೊಂಡಿದ್ದೆ. ದೀಪದ ಕೆಳಗಿನ ಕತ್ತಲನ್ನು ಕಣ್ಣಲ್ಲಿಟ್ಟುಕೊಂಡೇ ಬದುಕುವುದು ಅಭ್ಯಾಸವಾಗಿತ್ತು.

★★★

ಮಿ.ಕೆ. ಮಾತ್ರ ಔಪಚಾರಿಕವಾಗಿ ಮಾತಾಡಿಸಿಕೊಂಡು ಬುಸ ಬುಸನೆ ಓಡಾಡಿಕೊಂಡಿದ್ದ. ಬೆಳಿಗ್ಗೆ ಕೆಲಸಕ್ಕೆ ಬಂದಾಗ, ಮಧ್ಯೆ ಊಟದ ಸಮಯದಲ್ಲಿ ಮತ್ತು ದಿನದ ಕೊನೆಯಲ್ಲಿ ಕೆಲಸ ಮುಗಿದಾಗ ಮಾತ್ರ ಇವನು ಕಣ್ಣಿಗೆ ಬೀಳುತ್ತಿದ್ದ. ಮಿಕ್ಕಂತೆ ನನ್ನ ಪಾಡಿಗೆ ನಾನು ಹೊಸ ಜಾಗಕ್ಕೆ ಹೊಂದಿಕೊಳ್ಳುತ್ತ ಕಾಲ ಕಳೆಯತೊಡಗಿದೆ. ವೃತ್ತಿಪ್ರತಿಷ್ಠೆ ಯಾರಿಗಿರುವುದಿಲ್ಲ? ನಮ್ಮ ವಿಭಾಗದಲ್ಲಿದ್ದ ಇನ್ನುಳಿದ ಇಬ್ಬರಿಗೆ ಆ ಆತಂಕಗಳಿದ್ದಂತೆ ಕಾಣಲಿಲ್ಲ. ಅವರ ಮಿತಿಯಲ್ಲಿ ಅವರ ಪಾಡಿಗೆ ಅವರು ಇದ್ದರು. ಯುದ್ಧಕ್ಕೇ ಬರದವರ ಮುಂದೆ ಹೇಗೆ ಕಾದುವುದು? ಅವರನ್ನು ಪಕ್ಕಕ್ಕೆ ಸರಿಸಿದ್ದೆ.

ಮಿ.ಕೆ. ಯಾಕೋ ಯಾವುದೋ ಒತ್ತಡದಲ್ಲಿದ್ದಂತೆ ಆಗಾಗ ಕಂಡುಬರುತ್ತಿದ್ದ. ಕೆಲಸಕ್ಕೆ ಬರುವ ಮುನ್ನ ಜಿಮ್‌ಗೆ ಹೋಗದೆ ಬರುತ್ತಿರಲಿಲ್ಲ. ಕೆಲಸ ಮುಗಿದ ನಂತರ ಜಾಗಿಂಗ್ ಮಾಡಿಕೊಂಡೇ ಹೋಗುತ್ತಿದ್ದ. ಮಧ್ಯಾಹ್ನ ನಾವೆಲ್ಲ ಸ್ಯಾಂಡ್‌ವಿಚ್ ಕಡಿಯುತ್ತ ಕೂತರೆ ಇವನು ಪ್ರೋಟೀನ್ ಬಾರ್ ತಿನ್ನುತ್ತಿದ್ದ. ಹುಬ್ಬುಗಳನ್ನು ಅಂದವಾಗಿ ವ್ಯಾಕ್ಸಿಂಗ್ ಮಾಡಿಸಿಕೊಳ್ಳುತ್ತಿದ್ದ. ಹಣೆಗೆ, ಗಲ್ಲಕ್ಕೆ ನಿರಿಗೆಗಟ್ಟದಂತೆ ಬೋಟಾಕ್ಸ್ ಮಾಡಿಸಿಕೊಂಡು ಬರುತ್ತಿದ್ದ ದಿನ, ನನ್ನ ವೈದ್ಯ ಕಣ್ಣುಗಳಿಗೆ ಸಿಕ್ಕಿ ಬೀಳುತ್ತಿದ್ದ.

ಗಾಸಿಪ್ ಗಂಗಮ್ಮಗಳೆಂದೇ ನಾನು ಅಡ್ಡಹೆಸರು ಇಟ್ಟಿದ್ದ ನರ್ಸ್‌ಗಳಿಗೆ ಇವನನ್ನು ಕಂಡರೆ